<u>ದಿನಾಂಕಃ 21-06-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.</u>

**<u>ಪಾಟೀ ಸವಾಲುಃ ಶ್ರೀ ಎ ಐ ಜೆ 2 ನೇ ಎದುರುದಾರ ಪರಃ</u>**

ಕಮಕೇರಿ ಗ್ರಾಮ ಸರ್ವೆ ನಂ.38/1 ರ ಪೈಕಿ 34 ಗುಂಟೆ 14 ಆಣೆ ಮತ್ತು ಸರ್ವೆ ನಂ.38/3 ಅದ ಪೈಕಿ 34 ಗುಂಟೆ 14 ಆಣೆ ಜಮೀನು ರೈಲ್ವೆ ಲೈನ ಅಳವಡಿಸುವ ಸಲುವಾಗಿ ಸ್ವಾಧೀನಪಡಿಸಿಕೊಂಡಿರುತ್ತಾರೆ ಎಂದರೆ ಸರಿ. ಈ ಆಸ್ತಿಗಳು ನಮ್ಮ ಕುಟುಂಬದ ಪಿತ್ರಾರ್ಜಿತ ಆಸ್ತಿ ಎಂದರೆ ಸರಿ. ಮೊದಲು ಈ ಜಮೀನುಗಳು ನಮ್ಮ ತಂದೆಯ ಹೆಸರಿನಲ್ಲಿದ್ದವು. ನಮ್ಮ ತಂದೆ ಈಗ ತೀರಿಕೊಂಡಿರುತ್ತಾರೆ. ನಮ್ಮ ತಂದೆಗೆ ನಾವು 3 ಜನ ಮಕ್ಕಳು, ಜಾನವ್ವ ಪಾಂಡಪ್ಪ ವಾಸನದ ನಮ್ಮ ಅಕ್ಕ, ಕೃಷ್ಣಪ್ಪಾ ಅಪ್ಪಣ್ಣ ಅರಕೇರಿ ನನ್ನ ಅಣ್ಣ ಮತ್ತು ನಾನು. ನಮ್ಮ ಕುಟುಂಬದ ಆಸ್ತಿಗಳು 1985 ರಲ್ಲಿ ಲಿಖಿತ ವಾಟಣಿ ಪತ್ರದ ಮುಖಾಂತರ ಹಿಸ್ಸೆಯಾಗಿರುತ್ತದೆ. 1985 ರಲ್ಲಿ ಮಾತ್ರ ವಾಟಣಿ ಆಗಿರುತ್ತದೆ. ಆ ವಾಟಣಿ ಪತ್ರವನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಲಾಗಿದೆ. ನಿಆರ್-6 ಇದು ಆ ವಾಟಣಿ ಪತ್ರ ಇರುತ್ತದೆ. ಈ ವಾಟಣ ನನ್ನ ಮತ್ತು ನನ್ನ ಅಣ್ಣನ ನಡುವೆ ಆಗಿದೆ. ನಿಆರ್-6 ರಲ್ಲಿ ಯಾರ ಯಾರ ನಡುವೆ ವಾಟಣಿ ಆಗಿದೆ ಎಂದು ನಮೂದಿಸಿಲ್ಲ ಎಂದರೆ ಸರಿಯಲ್ಲ. ನಿಆರ್-6 ರಲ್ಲಿ ಯಾವ ಸರ್ವೆ ನಂಬರಗಳಲ್ಲಿ ವಾಟಣಿ ಆಗಿದೆ ಎಂದು ನಮೂದಿಸಿಲ್ಲ ಎಂದರೆ ಸರಿ. ಆದರೆ ಒಂದೊಂದು ಹೆಸರಿನ ಜಮೀನುಗಳ ಪೂರ್ತಿಯಾಗಿ ಒಬ್ಬೊಬ್ಬರ ಪಾಲಿಗೆ ನೀಡಲಾಗಿದೆ. ನಿಆರ್-6 ರಲ್ಲಿ ಕೃಷ್ಣಪ್ಪನ ಪಾಲಿಗೆ ಯಾವ ಸರ್ವೆ ನಂಬರ ನೀಡಲಾಗಿದೆ ಎಂದು ಬರೆದಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿಯು ಆ ದಿನ ಪಾಲು ವಾಟಣಿಯಾಗುವ ಸಮಯದಲ್ಲಿ ಎರಡು ವಾಟಣಿ ಪತ್ರಗಳನ್ನು ಬರೆದಿದ್ದು ಕೃಷ್ಣಪ್ಪನ ಹೆಸರಿಗೆ ಬಂದ ಎಲ್ಲಾ ಆಸ್ತಿಗಳನ್ನು ನಮೂದಿಸಿ ಇನ್ನೊಂದು ಪತ್ರ ಬರೆದು ಆತನಿಗೆ ಕೊಡಲಾಗಿದೆ. ನಮ್ಮ ಅಕ್ಕ ಜಾನವ್ವನಿಗೆ ಯಾವ ಜಮೀನು ಕೊಡಲಾಗಿದೆ ಎಂಬ ಬಗ್ಗೆ ಇದರಲ್ಲಿ ನಮೂದಿಸಿಲ್ಲ ಎಂದರೆ ಸರಿ. ಸಾಕ್ಷಿಯು ಸ್ವತಃ ಹೇಳುತ್ತಾರೆ ನಮ್ಮ ತಂದೆ ಬದುಕಿರುವ ಕಾಲಕ್ಕೆ ನಮ್ಮ ಅಕ್ಕ ಜಾನವ್ವನಿಗೆ 4 ಎಕರೆ ಜಮೀನನ್ನು ಕೊಟ್ಟು ಅದಕ್ಕೆ ಪ್ರತ್ಯೇಕ ದಾಖಲೆ ಮಾಡಿಕೊಟ್ಟಿರುತ್ತಾರೆ. ಮುದಕಿಪಟ್ಟಿ ಜಮೀನನ್ನು ನಮ್ಮ ಅಕ್ಕನಿಗೆ ಕೊಡಲಾಗಿದೆ. ಅದು ಕಮಕೇರಿ ಹದ್ದಿನಲ್ಲಿರುವ ಸರ್ವೆ ನಂಬರ 38/3 ಎ. ವಾಟಣಿ ಪತ್ರ ಮಾಡುವ ಸಮಯದಲ್ಲಿ 2-3 ಪತ್ರಗಳನ್ನು ಮಾಡುವುದಿಲ್ಲ ಒಂದೇ ಪತ್ರ ಮಾಡುತ್ತಾರೆ ಎಂದರೆ ಸರಿಯಲ್ಲ. ಎರಡು ವಾಟಣಿ ಪತ್ರಗಳನ್ನು ಮಾಡಲಾಗಿದೆ ನಿಆರ್-6 ಇದು ನನ್ನ ಪಾಲಿಗೆ ಆಸ್ತಿಗಳನ್ನು ನಮೂದಿಸಿದ ವಾಟಣಿ ಪತ್ರ ಎಂದು ನಾನು

ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಆರ್-6 ನ್ನು ನನಗೆ ಬೇಕಾದಂತೆ ತಯಾರಿಸಿ ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಿಆರ್-6 ನ್ನು ನೊಂದು ಮಾಡಲು ಯಾವುದೇ ತೊಂದರೆ ಇರಲಿಲ್ಲ. ನಿಆರ್-6 ವಾಟಣಿ ಪತ್ರವೇ ಆಗಿಲ್ಲ, ಈಗ ಈ ಪತ್ರವನ್ನು ಖೊಟ್ಟಿಯಾಗಿ ತಯಾರಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಮುದಕಿಪಟ್ಟಿ ಇದರಲ್ಲಿ ಒಂದು 6 ಎಕರೆ 17 ಗುಂಟೆ ಇನ್ನೊಂದು 4 ಎಕರೆ 6 ಗುಂಟೆ ಇರುತ್ತದೆ. ನಮ್ಮ ತಂದೆ ತೀರಿಹೋದ ನಂತರ ನಮ್ಮ ಕುಟುಂಬದ ಎಲ್ಲಾ ಸರ್ವೆ ನಂಬರುಗಳಿಗೆ ನನ್ನ ಹಾಗೂ ನಮ್ಮ ಅಣ್ಣ ಕೃಷ್ಣಪ್ಪನ ಹೆಸರನ್ನು ದಾಖಲಿಸಿಕೊಂಡಿದ್ದೇವೆ ಎಂದರೆ ಸರಿ. ಆ ಸಮಯದಲ್ಲಿ ಜಾನವ್ವ ನಾನೂ ವಾರಸುದಾರಳು ಇದ್ದೇನೆ ನನ್ನ ಹೆಸರನ್ನು ಸರ್ವೆ ನಂಬರುಗಳಿಗೆ ದಾಖಲಿಸಬೇಕು ಎಂದು ವರದಿ ಕೊಟ್ಟಿದ್ದಳು ಎಂದರೆ ಸರಿಯಲ್ಲ. ಜಾನವ್ವ ವರದಿ ಕೊಟ್ಟ ಪ್ರಕಾರ ME No.3124 ಎಂದು ದಾಖಲಾಗಿದೆ ಎಂದರೆ ಸರಿ. Mutation Entry ಯನ್ನು ನಿಆರ್-7 (2 ನೇ ಎದುರುದಾರರ ಪರವಾಗಿ) ಎಂದು ಗುರುತಿಸಲಾಯಿತು. ಜಾನವ್ವಳಿಗೆ 4 ಎಕರೆ ಜಮೀನನ್ನು ನಮ್ಮ ತಂದೆ ಕೊಟ್ಟಿದ್ದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಜಾನವ್ವಳಿಗೆ ಯಾವುದೇ ಜಮೀನು ಕೊಡದಿರುವ ಕಾರಣ ಆಕೆ ವರದಿ ಕೊಟ್ಟು ತನ್ನ ಹೆಸರನ್ನು ದಾಖಲಿಸಿಕೊಂಡಿದ್ದಾಳೆ ಎಂದರೆ ಸರಿಯಲ್ಲ.

ನನ್ನ ಅಣ್ಣ ಕೃಷ್ಣಪ್ಪ ಈಗ ತೀರಿಕೊಂಡಿದ್ದಾನೆ. ಆತನ ಹೆಂಡತಿ ಮಕ್ಕಳು ಆತನ ವಾರಸುದಾರರು. ಕೃಷ್ಣಪ್ಪನ ಹೆಂಡತಿ ಮಕ್ಕಳು ರಾಮದುರ್ಗ ನ್ಯಾಯಾಲಯದಲ್ಲಿ ನನ್ನ ಮೇಲೆ ಒಂದು ವಾಟಣಿ ದಾವೆ ಮಾಡಿರುತ್ತಾರೆ ಎಂದರೆ ಸರಿ. ಆ ದಾವೆಯಲ್ಲಿ ನಾನು ನ್ಯಾಯಾಲಯಕ್ಕೆ ಹಾಜರಾಗಿ ನನ್ನ ಕೈಪಿಯತ್ತನ್ನು ದಾಖಲಿಸಿದ್ದೇನೆ ಎಂದರೆ ಸರಿ. ಸದರಿ ದಾವೆ ವಿಚಾರಣೆಗೆ ಬಾಕಿ ಇದೆ ಎಂದರೆ ಸರಿ. ಕೃಷ್ಣಪ್ಪನ ಹೆಂಡತಿ ಮಕ್ಕಳು ರಾಮದುರ್ಗ ನ್ಯಾಯಾಲಯದಲ್ಲಿ ಈ ಮೊದಲು ಮೂಲ ದಾವೆ ನಂ.12/2015 ಎಂದು ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಲಯದಲ್ಲಿ ದಾವೆ ದಾಖಲಿಸಿದ್ದರು ಎಂದರೆ ಸರಿ. ಆ ದಾವೆಯನ್ನು ತಾಂತ್ರಿಕ ದೋಷದಿಂದ ಕೂಡಿದೆ ಎಂದು ಮತ್ತು ಅದೇ ಕಾರಣದ ಮೇಲೆ ಮತ್ತೊಂದು ದಾವೆ ಹಾಕುವ ಅವಕಾಶವಿಟ್ಟುಕೊಂಡು ಅರ್ಜಿ ಕೊಟ್ಟು ವಾಪಸ ಪಡೆದಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಆದರೆ ಅವರೇ ಅರ್ಜಿ ನೀಡಿ ದಾವೆಯನ್ನು ಹಿಂಪಡೆದಿರುತ್ತಾರೆ. ಆ ಪ್ರಕಾರ ಮತ್ತೊಂದು ದಾವೆ 23/2021 ನ್ನು ಪಾಲು ವಾಟಣಿಗಾಗಿ ದಾಖಲಿಸಿದ್ದಾರೆ ಎಂದರೆ ಸರಿ. ಆ ದಾವೆ ಇನ್ನೂ ವಿಚಾರಣೆಗೆ ಬಾಕಿ ಇದೆ ಎಂದರೆ ಸರಿ. ಮೂಲ ದಾವೆ ನಂ.12/2015 ರಲ್ಲಿ ನಮ್ಮ ಕೈಪಿಯತ್ತನ್ನು ಸಲ್ಲಿಸಲಾಗಿತ್ತು ಎಂದರೆ ಸರಿ. ಈಗ ನನಗೆ ತೋರಿಸಿದ ಕೈಪಿಯತ್ತನ್ನು ಆ ದಾವೆಯಲ್ಲಿ ನಾವೇ ಹಾಕಿದ್ದು ಎಂದರೆ ಸರಿ. ಅದನ್ನು ನಿಆರ್-8 ಎಂದು

ಗುರುತಿಸಲಾಯಿತು. ಅದರ ಮೇಲೆ ನನ್ನ ಸಹಿ ಇದೆ ಎಂದರೆ ಸರಿ. ಸದರಿ ಸಹಿಯನ್ನು ನೋಡುತ್ತಿದ್ದು, ಗುರುತಿಸುತ್ತೇನೆ. ಸದರಿ ಸಹಿಗಳನ್ನು ನಿಆರ್-8(ಎ) ಮತ್ತು 8(ಬಿ) ಎಂದು ಗುರುತಿಸಲಾಯಿತು. ಅದೇ ಪ್ರಕಾರ ನನ್ನ ಅಕ್ಕನ ಮಗ ಗಿರೀಶ ಪಾಂಡಪ್ಪ ವಾಸನದ ಈತನು ಸಹಿ ಮಾಡಿರುತ್ತಾನೆ ಎಂದರೆ ಸರಿ. ಆತನ ಸಹಿಗಳನ್ನು ನೋಡುತ್ತಿದ್ದು, ಗುರುತಿಸುತ್ತೇನೆ. ಅವುಗಳನ್ನು ನಿಆರ್-8(ಸಿ) ಮತ್ತು ನಿಆರ್-8(ಡಿ) ಎಂದು ಗುರುತಿಸಲಾಯಿತು. ಕೈಪಿಯತ್ತಿನಲ್ಲಿ ಬರೆದ ವಿಷಯ ನನ್ನ ಪ್ರಕಾರ ಸರಿಯಿದೆ.

ಕೃಷ್ಣಪ್ಪ ಮತ್ತು ಆತನ ಹೆಂಡತಿ ಧ್ರಾಕ್ಷಾಯಿಣಿ 7-8 ವರ್ಷ ದಾಂಪತ್ಯ ಸರಿಯಿತ್ತು, 2 ಮಕ್ಕಳಾದ ನಂತರ ಅವರ ನಡುವಿನ ಸಂಬಂಧ ಸರಿಯಿರಲಿಲ್ಲ. ಆ ಮಕ್ಕಳೂ ಸಹ ಧ್ರಾಕ್ಷಾಯಿಣಿ ಹತ್ತಿರ ಇವೆ ಎಂದರೆ ಸರಿ. ಕೃಷ್ಣಪ್ಪ ಆಸ್ತಿ ಒಡೆಯುವ ಸಲುವಾಗಿ ನಾವೇ ಕೃಷ್ಣಪ್ಪ ಮತ್ತು ಆತನ ಹೆಂಡತಿ ನಡುವೆ ಜಗಳ ತಂದಿರುತ್ತೇವೆ ಎಂದರೆ ಸರಿಯಲ್ಲ. ಕೃಷ್ಣಪ್ಪನಿಗೆ ಪಾಶ್ವವಾಯು ಖಾಯಿಲೆ ಬಂದಿತ್ತು ಎಂದರೆ ಸರಿ. ಹೀಗಾಗಿ ಆತನಿಗೆ ಸರಿಯಾಗಿ ಮಾತನಾಡಲು ಬರುತ್ತಿರಲಿಲ್ಲ ಎಂದರೆ ಸರಿ. ನಡೆದಾಡಲೂ ಬರುತ್ತಿರಲಿಲ್ಲ ಎಂದರೆ 5-6 ವರ್ಷ ಸ್ವಲ್ಪ ಸ್ವಲ್ಪ ನಡೆಯುತ್ತಿದ್ದ ನಂತರ ನಡೆಯಲು ಆಗಲಿಲ್ಲ. ಆತ ತನ್ನ ದೇಹದ ಸ್ವಾಧೀನ ಕಳೆದುಕೊಂಡಿದ್ದ ಎಂದರೆ ಸರಿ. ಕೃಷ್ಣಪ್ಪನಿಗೆ ಸುಮಾರು 12-13 ವರ್ಷಗಳ ಹಿಂದೆ ಪಾಶ್ವವಾಯು ಖಾಯಿಲೆಯಾಗಿತ್ತು. ಈಗ ಆತ ತೀರಿಕೊಂಡು 4 ವರ್ಷಗಳಾಯಿತು. ಕೃಷ್ಣಪ್ಪ ಮತ್ತು ಆತನ ಹೆಂಡತಿ ನಡುವೆ ಜಗಳ ಹಚ್ಚಿ ಅಕೆಯನ್ನು ಮನೆಯಿಂದ ಹೊರಗಡೆ ನಾವೇ ಹಾಕಿರುತ್ತೇವೆ ಎಂದರೆ ಸರಿಯಲ್ಲ. ಕೃಷ್ಣಪ್ಪನಿಗೆ ಪಾಶ್ವವಾಯು ಆಗಿದ್ದರಿಂದ ನಮಗೆ ಅನುಕೂಲವಾಗುವಂತೆ ನಮ್ಮ ಹೆಸರನ್ನು ಬರೆದುಕೊಂಡಿದ್ದೇವೆ ಎಂದರೆ ಸರಿಯಲ್ಲ. ಕೃಷ್ಣಪ್ಪನ ಕಣ್ಣುಗಳು ಹೋಗಿದ್ದವು ಎಂದರೆ ಸರಿಯಲ್ಲ. ಕೃಷ್ಣಪ್ಪನ ಕಣ್ಣುಗಳು ಸರಿಯಿದ್ದವು ಆದರೆ ಮಂದವಾಗಿದ್ದವು. ಕೃಷ್ಣಪ್ಪನನ್ನು ಬಾಗಲಕೋಟೆಯ ದಾಸರ ಕಣ್ಣಿನ ಆಸ್ಪತ್ರೆಗೆ ತೋರಿಸಿದ್ದೆವು. ಆ ಬಗ್ಗೆ ವರದಿಗಳು ಇವೆ, ಅವುಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಲು ಯಾವುದೇ ತೊಂದರೆ ಇಲ್ಲ ಎಂದರೆ ಸರಿ.

ನಮ್ಮ ಕುಟುಂಬದ ಆಸ್ತಿಗಳು ಇಲ್ಲಿಯವರೆಗೂ ಯಾವುದೇ ಪಾಲು ಆಗಿಲ್ಲ ಎಂದರೆ ಸರಿಯಲ್ಲ. ಕುಟುಂಬದ ಆಸ್ತಿಗಳು ಪಾಲು ಆಗಿವೆ ಎಂದು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ರೇಲ್ವೆವರು ತುಂಬಿದ ಹಣವನ್ನು ಪೂರ್ತಿಯಾಗಿ ನಾವೇ ಲಪಟಾಯಿಸುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ರಾಮದುರ್ಗ ನ್ಯಾಯಾಲಯದಲ್ಲಿ ಸಲ್ಲಿಸಿದ ಕೈಪಿಯತ್ತಿನಲ್ಲಿ ಆಸ್ತಿಯಲ್ಲಿ

ಪಾಲು ಆಗಿಲ್ಲ ಎಂದು ಒಪ್ಪಿಕೊಂಡಿದ್ದರೂ ಸಹ ಈಗ ಪಾಲು ಆಗಿಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ರೇಲ್ವೆವರು ಜಮಾ ಮಾಡಿದ ಹಣವನ್ನು ಪೂರ್ತಿಯಾಗಿ ಪಡೆದುಕೊಳ್ಳುವ ಉದ್ದೇಶದಿಂದ ಸುಳ್ಳು ವಾಟಣಿ ಪತ್ರವನ್ನು ತಯಾರಿಸಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ವಾಟಣಿ ಪತ್ರದ ಮೇಲಿರುವ ಸಹಿ ಕೃಷ್ಣಪ್ಪನ ಸಹಿಗಳಲ್ಲ ಎಂದರೆ ಸರಿಯಲ್ಲ.

ಕೃಷ್ಣಪ್ಪನ ಹೆಸರಿಗೆ ಸುಳ್ಳು ಖರೀದಿ ಪತ್ರವನ್ನು ನಾವೇ ಸೃಷ್ಟಿಮಾಡಿದ್ದೇವೆ ಎಂದರೆ ಸರಿಯಲ್ಲ. ಕೃಷ್ಣಪ್ಪ ತನ್ನ ಆಸ್ಪತ್ರೆ ಖರ್ಚಿನ ಸಲುವಾಗಿ ಆತನೇ ತನ್ನ ಜಮೀನನ್ನು ಮಾರಾಟ ಮಾಡಿದ್ದಾನೆ. ಅದರ ಮೇಲಿನ ಸಹಿಯೂ ಸಹ ಆತನದ್ದಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಸ್ವತಃ ಹೇಳುತ್ತಾನೆ ಕೃಷ್ಣಪ್ಪ ಸ್ವತಃ ಸಬ್‌ರಜಿಸ್ಟರ ಕಛೇರಿಯಲ್ಲಿ ಖರೀದಿ ಕೊಟ್ಟಿರುತ್ತಾನೆ. ನನಗೆ ಹಕ್ಕು ಇಲ್ಲದಿದ್ದರೂ ನಾನು ದಾನಪತ್ರ ಬರೆದುಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಆಸ್ತಿಯನ್ನು ಮುಳುಗಿಸುವ ಸಲುವಾಗಿ ನನ್ನ ಹೆಂಡತಿಯ ಹೆಸರಿಗೆ ದಾನಪತ್ರ ಬರೆದುಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಕೃಷ್ಣಪ್ಪ ತೀರಿಕೊಂಡಿದ್ದು ಆತನ ಹೆಂಡತಿಗೆ ಪಾಲು ಕೊಡಬಾರದು ಎಂಬ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ರೇಲ್ವೆವರು ಜಮಾ ಮಾಡಿದ ಪರಿಹಾರ ಹಣದಲ್ಲಿ ಕೃಷ್ಣಪ್ಪನ ಹೆಂಡತಿ ಮತ್ತು ಮಕ್ಕಳಿಗೂ ಪಾಲು ಬರುತ್ತದೆ ಎಂದರೆ ಸರಿಯಲ್ಲ. ಕೃಷ್ಣಪ್ಪನ ಹೆಂಡತಿ ಮತ್ತು ಮಕ್ಕಳಿಗೆ ಹಣ ಕೊಡಬಾರದು ಎಂಬ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಉಕ್ತಲೇಖದ ಅನ್ವಯ ಬೆರಳಚ್ಚುಗಾರರು ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿ ಪಡೆದುಕೊಳ್ಳಲಾಯಿತು)

ಓ ಹೇ ಕೆ ಸರಿ ಇದೆ.

(ಕುಡವಕ್ಕಲಿಗೇರ ಎಮ್ ಜಿ)
1 ನೇ ಹೆಚ್ಚುವರಿ ಜಿಲ್ಲಾ ಹಾಗೂ ಸತ್ರ
ನ್ಯಾಯಾಧೀಶರು, ಬೆಳಗಾವಿ.